ಕಥೆ

# ಕೊನೆಯ ಮಾತು



**ಪ್ರೇಮ್‌ಕುಮಾರ್ ಹರಿಯಬ್ಬೆ**

ಕಲೆ: ಸಂತೋಷ್ ಸಸಿಹಿತ್ಲು

ಮಳೆ ಆರಂಭವಾಗುತ್ತಿದ್ದಂತೆ ಎಚ್ಚರವಾಯಿತು. ಮತ್ತೆ ನಿದ್ದೆಬಾರದೆ ತುಂಬಾ ಹೊತ್ತಿನ ತನಕ ಮಗ್ಗುಲು ಬದಲಾಯಿಸುತ್ತಲೇ ಇದ್ದ. ದಿಂಬಿನ ಕೆಳಗಿದ್ದ ಮೊಬೈಲ್‌ನಿಂದ 'ಬಿಪ್' ಸದ್ದು ಕೇಳಿಸಿತು. ಇಷ್ಟೊತ್ತಲ್ಲಿ ಯಾರು ಫೋನ್ ಮಾಡ್ತಿರಬಹುದು? ಅಂದುಕೊಂಡ. ಕಾಲ್ ಮಾಡಿದ್ದು ಅರುಂಧತಿ! ಇಷ್ಟೊತ್ತಲ್ಲಿ ಯಾಕೆ ಮಾಡಿರಬಹುದು? ಮತ್ತೆ ಕಾಲ್ ಮಾಡಬಹುದು ಎಂದುಕೊಳ್ಳುತ್ತಲೇ ಕಿಟಕಿ ಸರಿಸಿ ಹೊರಗೆ ನೋಡಿದ. ಪೂರಾ ಕತ್ತಲಿತ್ತು. ಮಳೆ ಹನಿಗಳ ಸದ್ದು ಬಿಟ್ಟರೆ ಬೇರೇನೂ ಕೇಳಿಸಲಿಲ್ಲ. ಸದ್ಯಕ್ಕೆ ಮಳೆ ನಿಲ್ಲಲ್ಲ ಅನ್ನಿಸಿತು.

'ನಾಳೆ ನಿಂಗೆ ಅಸೈನ್‌ಮೆಂಟ್ ಇಲ್ಲ. ನಾಲ್ಕುಗಂಟೆ ಹೊತ್ತಿಗೆ ಬಂದು ಟ್ರೈನಿಗಳ ಕಾಪಿಗಳನ್ನು ನೋಡಿ ಜನರಲ್ ಡೆಸ್ಕಿಗೆ ಮೂವ್ ಮಾಡು. ನಾನು ಏಳು ಗಂಟೆಗೆ ಬರ್ತೀನಿ...' ಎಂದು ಹಿಂದಿನ ದಿನ ಆಫೀಸಿನಿಂದ ಹೊರಡುವಾಗ ಚೀಫ್ ಹೇಳಿದ್ದು ನೆನಪಾಗಿ ಬೆಳಿಗ್ಗೆ ಹತ್ತರವರೆಗೆ ಮಲಗಬಹುದು ಅನ್ನಿಸಿ ಹೊದ್ದು ಮಲಗಿದ. ಬಾಲ್ಕನಿಯಲ್ಲಿ ಬೀಳುತ್ತಿದ್ದ ನೀರಿನ ಸದ್ದಿಗೆ ಕಿವಿ ಕೊಟ್ಟ. ಕೆಲವೇ ನಿಮಿಷಗಳಲ್ಲಿ ನಿದ್ದೆಗೆ ಜಾರಿದ.

ಆರು ಗಂಟೆ ಹೊತ್ತಿಗೆ ಫೋನ್ ಸದ್ದು ಮಾಡಿತು. ಎತ್ತಿಕೊಳ್ಳುತ್ತಿದ್ದಂತೆ, 'ಗುಡ್ ಮಾರ್ನಿಂಗ್ ಸಿದ್ಧಾರ್ಥ್. ಸಾರಿ, ಇಷ್ಟು ಬೇಗ ಫೋನ್ ಮಾಡ್ತಿರೋದಕ್ಕೆ' ಎಂದು ಹೇಳಿ ಐದಾರು ಸೆಕೆಂಡು ಸುಮ್ಮನಿದ್ದಳು.

'ರಾತ್ರಿ ನಂಗೂ ಅಭಿಗೂ ಜಗಳ ಆಯ್ತು!. ಹನ್ನೊಂದು ಗಂಟೆ ಹೊತ್ತಲ್ಲಿ ಅವನ ಮೇಡಂ ಕಾಲ್ ಮಾಡಿದ್ದಳು. ಅದೇ ಎಜಿಎಂ ಸುದೇಷ್ಣ. ಅಭಿ ಬೆಡ್‌ರೂಂ ಹೊರಗೆ ಬಾಲ್ಕನಿಯಲ್ಲಿ ನಿಂತುಕೊಂಡು ತುಂಬಾ ಹೊತ್ತಿನ ತನಕ ಅವಳ ಜತೆ ಮಾತಾಡ್ತಿದ್ದ. ನಾನು ನಿದ್ದೆ ಹೋದವಳಂತೆ ಮಲಗಿಕೊಂಡೇ ಮಾತು ಕೇಳಿಸಿಕೊಂಡೆ. ಅಭಿ ಹೋಗ್ತಿರೋದು ಡೆಲ್ಲಿಗಲ್ಲ, ಊಟಿಗೆ. ಅವನ ಜತೆ ಅವಳೂ ಹೋಗ್ತಿದ್ದಾಳೆ ಅಂತ ಗೊತ್ತಾಯ್ತು. ಅರ್ಧ ಗಂಟೆ ಆದ ಮೇಲೆ ಮಲಗೋಕೆ ಬಂದ. ನಂಗೆ ಸಿಟ್ಟು ಬಂದಿತ್ತು. 'ನೀನು ಹೋಗ್ತಿರೋದು ಊಟಿಗೋ, ಡೆಲ್ಲಿಗೂ...' ಎಂದು ಕೇಳಿದೆ. ಅದಕ್ಕವನು, 'ನಾನು ಎಲ್ಲಿಗಾದರೂ ಹೋಗ್ತಿನಿ ನಿಂಗ್ಯಾಕೆ' ಅಂದ. ಮಾತಿಗೆ ಮಾತು ಬೆಳೀತು. ಅವನೇ ಮೊದಲು